<u>ದಿಃ **03.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಪಿ.ಆರ್.ಎಂ ವಕೀಲರಿಂದಃ ಪ್ರತಿವಾದಿಯರ ಪರವಾಗಿಃ</u>

**24)** ದಾವಾ ಆಸ್ತಿಯಾದಂತಹ ಪ್ಲಾಟ ನಂಬರಃ 57 ರಿ.ಸ.ನಂಬರಃ 90/ಬ ಈ ಆಸ್ತಿಯಲ್ಲಿ ಬರುವಂತಹ ಸದರಿ ಆಸ್ತಿಯನ್ನು ನನ್ನ ತಾಯಿಯಾದಂತಹ ಮಹಾದೇವಕ್ಕ ಗುಡ್ಡಪ್ಪ ವೀರಾಪುರ ಇವರು ತಮ್ಮ ಸ್ವಂತ ಹಣದಿಂದ 2004 ರಲ್ಲಿ ಖರೀದಿ ಮಾಡಿರುತ್ತಾರೆ ಅಂದರೆ ಸರಿ. ರಿ.ಸ.ನಂಬರಃ 97/3/2 ಈ ಆಸ್ತಿಯನ್ನು ನಮ್ಮ ಅಜ್ಜನಾದ ತಿರಕಪ್ಪ ಈತನು ಬಸವರಾಜ ವಾರ್ತಿ ಇವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿ. ನಮ್ಮ ತಾಯಿ ಮಹಾದೇವಕ್ಕ ಕೆ.ವಿ.ಜಿ ಬ್ಯಾಂಕ ಹಾವೇರಿ ಶಾಖೆಯಲ್ಲಿ ಈಕೆ ರೂ.2,00,000/- ಸಾಲವನ್ನು 2011 ನೇ ಇಸ್ವಿಯಲ್ಲಿ ಪಡೆದ ಬಗ್ಗೆ ನನಗೆ ಮಾಹಿತಿ ಇರುವದಿಲ್ಲ ಅಂದರೆ ಸರಿ. ಸದರಿ ಸಾಲದ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಆ ವಿಷಯ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**25)** ರಿ.ಸ.ನಂಬರಃ 5/ಅ ಪ್ಲಾಟ ನಂಬರಃ 79 ಇದನ್ನು ಮಾಲತೇಶ ಗುಡ್ಡಪ್ಪ ವೀರಾಪುರ ಈತನ ಹೆಸರಿನಲ್ಲಿ ಖರೀದಿಯಾಗಿರುತ್ತದೆ ಅಂದರೆ ಸರಿ. 2017-18 ನೇ ಸಾಲಿನಲ್ಲಿ ನಾವು ನಮ್ಮ ತಂದೆಯಾದಂತಹ ಗುಡ್ಡಪ್ಪ ಜೊತೆ ಎಲ್ಲರೂ ಸೇರಿ ವಾಸ ಇದ್ದೇವು ಅಂದರೆ ಸರಿ. ಆ ಸಮಯದಲ್ಲಿ ನಾನು ಒಬ್ಬಳೇ ಇರಲಿಲ್ಲ, ನನ್ನ ತಮ್ಮನೂ ಸಹ ನಮ್ಮ ಜೊತೆ ಇದ್ದ ಎಂದು ನುಡಿಯುತ್ತಾರೆ. 2 ನೇ ವಾದಿ ಮಾಲತೇಶ ಈತನ ಮದುವೆಯು 2019 ರಂದು ಆಗಿರುತ್ತದೆ. ಸದರಿ ಮಾಲತೇಶ 2 ನೇ ವಾದಿ ಈತನು ತನ್ನ ವಿವಾಹವನ್ನು ಪ್ರೇಮ ವಿವಾಹ ಮಾಡಿಕೊಂಡಿರುತ್ತಾನೆ ಅಂದರೆ ಸರಿ. ಆ ರೀತಿ 2 ನೇ ವಾದಿ ಮಾಲತೇಶ ಈತನು

ಮದುವೆಯಾದ ನಂತರ ಆತನು ನಮ್ಮ ತಂದೆಯ ಜೊತೆಯಿಂದ ಪ್ರತ್ಯೇಕವಾಗಿ ತನ್ನ ಹೆಂಡತಿಯ ಜೊತೆಯಲ್ಲಿ ಬೇರೆ ಮನೆ ಮಾಡಿಕೊಂಡು ವಾಸ ಮಾಡಿಕೊಂಡು ಬರುತ್ತಿದ್ದ ಅಂದರೆ ಸರಿ.

**26)** ದಾವಾ ಆಸ್ತಿಯಾದಂತಹ 90/ಬ ಪ್ಲಾಟ ನಂಬರಃ 57 ಇದು ನಮ್ಮ ತಾಯಿಯ ತವರು ಮನೆಯಿಂದ ಬಂದಂತಹ ಆಕೆಯ ಸ್ವಂತ ಗಳಿಸಿದ ಆಸ್ತಿಯಾಗಿರುತ್ತದೆ ಅಂದರೆ ಸರಿಯಲ್ಲ. ಸದರಿ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿರುವದಿಲ್ಲ, ದಾವಾ ಆಸ್ತಿಯನ್ನು ನಮ್ಮ ತಾಯಿಯ ತವರು ಮನೆಯವರು ಆಕೆಯ ಹೆಸರಿನಲ್ಲಿ ಖರೀದಿ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ದಾವಾ ಆಸ್ತಿಯಲ್ಲಿ ನನಗಾಗಲೀ ಮತ್ತು ನನ್ನ ಸಹೋದರನಾದ 2 ನೇ ವಾದಿ ಮಾಲತೇಶ ಇಬ್ಬರಿಗೂ ಸಹ ಯಾವುದೇ ರೀತಿ ಪಾಲು ಬರುವದಿಲ್ಲ ಅಂದರೆ ಸರಿಯಲ್ಲ. ನಾನು ಮತ್ತು 2 ನೇ ವಾದಿ ನನ್ನ ಸಹೋದರ ಮಾಲತೇಶ ಇಬ್ಬರೂ ನಾವು ಬೇರೆ ಜಾತಿಯವರ ಜೊತೆ ವಿವಾಹ ಆಗಿದ್ದರಿಂದ ಈಗಲೂ ಸಹ ನಮ್ಮ ತಂದೆ, ತಾಯಿ ಜೊತೆ ಮಾತನಾಡುವದಿಲ್ಲ ಅಂದರೆ ಸರಿ. ನಮ್ಮ ಇಬ್ಬರ ಪ್ರೇಮ ವಿವಾಹದಿಂದ ನಮ್ಮ ನಡುವೆ ಮತ್ತು ನಮ್ಮ ತಂದೆ ತಾಯಿ ನಡುವೆ ಈಗಲೂ ಸಹ ನಮ್ಮ ವೈಮನಸ್ಸು ಇರುತ್ತದೆ ಅಂದರೆ ಸರಿ. ಆ ರೀತಿ ದುರುದ್ದೇಶದಿಂದ ನಾವು ಪ್ರತಿವಾದಿಯರ ವಿರುದ್ದ ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಿಸ್ಸೇ ಬರದೇ ಇದ್ದರೂ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**27)** 3 ನೇ ಪ್ರತಿವಾದಿ ಜ್ಯೋತಿ ಉರ್ಫ ಸುಮಂಗಲಾ ಈಕೆ ನನಗೆ ಅಕ್ಕಳಾಗಬೇಕು. ಸದರಿ 3 ನೇ ಪ್ರತಿವಾದಿ ನಮ್ಮ ಅಕ್ಕಳಾದ ಜ್ಯೋತಿ ಇವರ ಮದುವೆಯನ್ನು ನಮ್ಮ ತಂದೆ ತಾಯಿ ಸ್ವತಃ ಖರ್ಚು ಮಾಡಿಕೊಟ್ಟಿರುತ್ತಾರೆ ಅಂದರೆ ಸರಿ. ನಮ್ಮ ಅಕ್ಕಳ ಮದುವೆಗೆ ನಮ್ಮ ತಂದೆ ತಾಯಿ ಸಾಕಷ್ಟು ಸಾಲ

ಮಾಡಿರುತ್ತಾರೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಮ್ಮ ತಂದೆಗೆ ಯಾವುದೇ ದುಶ್ಚಟ ಇಲ್ಲ ಅಂದರೆ ಸರಿಯಲ್ಲ. ನಾವು ಇಬ್ಬರೂ ವಾದಿಗಳು ಸೇರಿ 1 ನೇ ಪ್ರತಿವಾದಿ ಗುಡ್ಡಪ್ಪ ಈತನಿಗೆ ಹಲವಾರು ದುಶ್ಚಟಗಳು ಇದ್ದುದರಿಂದ ನಮ್ಮನ್ನು ಸಾಕಿ ಸಲುಹಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಮ್ಮ ತಂದೆ ಗುಡ್ಡಪ್ಪ ಈತನು ಒಟ್ಟು ಕುಟುಂಬದ ಆಸ್ತಿಯಿಂದ ಬಂದಂತಹ ಆದಾಯದಿಂದ ಖರೀದಿಗೆ ತೆಗೆದುಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಾ.</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.